
■ ಹನಿ



## ಸಲಹೆಗಾರ ಜಾಕಿ ಚಾನ್

ಜಗತ್ತಿನಾದ್ಯಂತ ಅಭಿಮಾನಿಗಳನ್ನು ಹೊಂದಿರುವ ಜಾಕಿ ಚಾನ್ ಈಗ ಹಾಲಿವುಡ್‌ನಿಂದ ನೇರವಾಗಿ ರಾಜಕೀಯಕ್ಕೆ ಜಂಪ್ ಮಾಡಿದ್ದಾರೆ. ಅವರೀಗ ಚೀನಾದ ಆಳುವ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಸಮಿತಿಯ ಅಧಿಕೃತ ಸಲಹೆಗಾರ. 40 ವರ್ಷಗಳ ಹಾಲಿವುಡ್ ಚಿತ್ರ ಬದುಕಿನ ಮುಸ್ಸಂಜೆಯಲ್ಲಿ ಅವರೀಗ ಕಮ್ಯುನಿಸ್ಟ್ ಪಕ್ಷದ ಈ ಆಂತರಿಕ ಸಮಿತಿಗೆ ಸದಸ್ಯರಾಗಿ ಸೇರ್ಪಡೆಯಾಗಿದ್ದಾರೆ. 'ಚೀನಾದಿಂದ ಬಡತನವನ್ನು ಸಂಪೂರ್ಣವಾಗಿ ತೊಲಗಿಸುವುದೇ ನನ್ನ ಗುರಿ' ಎಂದು ಈ ಅಧಿಕಾರ ವಹಿಸಿಕೊಂಡ ಬಳಿಕ ಜಾಕಿ ಚಾನ್ ಹೇಳಿದ್ದಾರೆ. ಅಂದ ಹಾಗೆ, ಚೀನಾದಲ್ಲಿ ಶೇಕಡಾ 10ರಷ್ಟು ಜನರ ದಿನದ ಸರಾಸರಿ ವರಮಾನ ಕೇವಲ 1.30 ಪೌಂಡ್ ಎಂದು ಸರಕಾರವೇ ಪ್ರಕಟಿಸಿದೆ.

ಹಾಂಕಾಂಗ್‌ನಲ್ಲಿ ಜನಿಸಿದ ಜಾಕಿ ಚಾನ್‌ಗೂ ಬಡತನ ಹೊಸತಲ್ಲ. 1954ರಲ್ಲಿ ಅತ್ಯಂತ ಬಡ ಕುಟುಂಬದಲ್ಲಿ ಚಾನ್ ಜನಿಸಿದಾಗ ಆತನ ತಂದೆ ಆಸ್ಪತ್ರೆಯ ಬಿಲ್ ಕಟ್ಟಲೂ ದುಡ್ಡಿಲ್ಲದೆ ಮಗುವನ್ನೇ ಮಾರಲು ಹೊರಟಿದ್ದರಂತೆ. ಚಿಕ್ಕಂದಿನಲ್ಲಿ ಆತ ಕಲಿಯುತ್ತಿದ್ದ ಶಾಲೆಗೆ ರೆಡ್‌ಕ್ರಾಸ್ ಸದಸ್ಯರು ಬಂದು ಟೂಥ್‌ಬ್ರಷ್, ಹಾಲು, ಬಟ್ಟೆ ಮುಂತಾಗಿ ಉಚಿತ ವಸ್ತುಗಳನ್ನು ನೀಡಿದಾಗ ಚಾನ್‌ಗೆ ಒಂದು ಕೋಟು ಸಿಕ್ಕಿದ್ದನ್ನು ಈಗಲೂ ನೆನಪಿಸಿಕೊಳ್ಳುತ್ತಾನೆ. ಅಂದ ಹಾಗೆ ಈಗ ಜಾಕಿ ಚಾನ್ ಆಸ್ತಿಯ ಒಟ್ಟು ಮೌಲ್ಯ 85 ದಶಲಕ್ಷ ಪೌಂಡ್!

'ಇಷ್ಟೆಲ್ಲ ಹಣವನ್ನು ನಾನು ಇಟ್ಟುಕೊಂಡು ಮಾಡುವುದೇನಿಲ್ಲ. ಇದೆಲ್ಲವನ್ನೂ ದಾನ ಮಾಡುತ್ತೇನೆ. ದೇಶದಲ್ಲಿ ಬಡತನ ಇಲ್ಲವಾಗಿಸುವುದಕ್ಕೆ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಬೇಕಿದೆ. ನಾನು ಸರಕಾರದ ಸಲಹೆಗಾರನಾಗಿ ಸೇರಿರುವುದಕ್ಕೆ ಇದೇ ಕಾರಣ' ಎನ್ನುವುದು ಚಾನ್ ಸ್ಪಷ್ಟನುಡಿ. 1988ರಲ್ಲಿ ಸ್ಥಾಪಿಸಿರುವ ಜಾಕಿ ಚಾನ್ ಫೌಂಡೇಶನ್ ಈಗಾಗಲೆ ಇಂತಹ ಕೆಲಸಗಳಲ್ಲಿ ತೊಡಗಿದ್ದು, ಚಾನ್ ಇದಕ್ಕಾಗಿ ತನ್ನ ಹಾಲಿವುಡ್ ಗೆಳೆಯರ ನೆರವನ್ನೂ ಕೋರಿದ್ದಾನೆ. ಕ್ರಿಸ್ ಟಕರ್, ಓವೆನ್ ವಿಲ್ಸನ್ ಮತ್ತು ವಿಲ್ ಸ್ಮಿತ್ ಮುಂತಾದ ಹಾಲಿವುಡ್‌ನ ಮಹಾತಾರೆಯರು ಚಾನ್ ಜತೆ ಕೈಗೂಡಿಸುವುದಾಗಿ ಭರವಸೆ ನೀಡಿದ್ದಾರಂತೆ.

## ವಿವಾದಪ್ರಿಯೆ ಏಕ್ತಾ

ಈಕೆಯ ಹೆಸರೇನೋ ಏಕ್ತಾ ಕಪೂರ್. ಆದರೆ ಈಕೆ ಬಾಯಿ ಬಿಟ್ಟರೆ ಗೆಳೆಯರ ನಡುವಣ ಏಕತೆ ಮುರಿದು ಹೋಗುವುದು ಖಂಡಿತಾ! ಬಾಲಿವುಡ್‌ನ ನಿರ್ಮಾಪಕಿ, ಕಿರುತೆರೆಯ ಸ್ಟಾರ್ ಏಕ್ತಾ ಕಪೂರ್ ಎಲ್ಲೇ ಹೋದರೂ ಅಲ್ಲಿ ವಿವಾದಗಳು ಸದಾ ಕುಣಿಯುತ್ತವೆ! ಈಕೆ ನಿರ್ಮಿಸುವ ಸಿನಿಮಾಗಳಂತೂ ವಿವಾದಗಳನ್ನು ಸೃಷ್ಟಿಸಲೆಂದೇ ಮಾಡಿರುವಂತೆ ಇರುತ್ತವೆ. ಈಗ ಹೊಸ ಸಿನಿಮಾ 'ಏಕ್ ಥಿ ದಾಯನ್' ಕೂಡಾ ವಿವಾದಕ್ಕೆ ಒಳಗಾಗಿದೆ. "ಮಾಟಗಾತಿಯೊಬ್ಬಳ ಕಥೆಯ ಮೂಲಕ ಈ ಸಿನಿಮಾದಲ್ಲಿ ಹೆಣ್ಣನ್ನು ಮತ್ತಷ್ಟು ಅವಮಾನಿಸಲಾಗಿದೆ. ಈಗಾಗಲೆ ಹೆಣ್ಣುಮಕ್ಕಳು ವಿರುದ್ಧ ದೇಶದಲ್ಲಿ ದೌರ್ಜನ್ಯ ಹೆಚ್ಚಿದ್ದು ಇಂತಹ ಸಿನಿಮಾಗಳಿಂದಾಗಿ ಹೆಣ್ಣಿನ ಕುರಿತ ರೂಢಿಗತ ದ್ವೇಷವನ್ನು ಇನ್ನಷ್ಟು ಬೆಳೆಸಲಾಗುತ್ತಿದೆ. ಈ ಸಿನಿಮಾಕ್ಕೆ ಅವಕಾಶ ಕೊಡಬೇಡಿ' ಎಂದು ಇಪ್ಸಿತಾ ರಾಯ್ ಚಕ್ರವರ್ತಿ ಎನ್ನುವವರು ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರಿಗೆ ದೂರು ಸಲ್ಲಿಸಿದ್ದಾರೆ. ಈ ದೂರನ್ನು ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ರಾಷ್ಟ್ರಪತಿಯವರು ಕಳುಹಿಸಿಕೊಟ್ಟಿದ್ದಾರೆ.

ವಿವಾದಗಳು ಏಕ್ತಾಗೆ ಹೊಸದಲ್ಲ. ಇತ್ತೀಚೆಗೆ ಈಕೆ ಬ್ಯಾಂಕ್ ಒಂದರಲ್ಲಿ ದಾರಿಗೆ ಅಡ್ಡ ಬಂದ ಹಿರಿಯ ನಾಗರಿಕರೊಬ್ಬರನ್ನು 'ಕೊಳಕು ಮುದುಕ' ಎಂದು ಬೈದದ್ದು ಸುದ್ದಿಯಾಗಿತ್ತು. ವಿದ್ಯಾ ಬಾಲನ್ ನಟಿಸಿದ 'ಡರ್ಟಿ ಪಿಕ್ಚರ್'ಅನ್ನು ಈಕೆ ನಿರ್ಮಿಸಿದ್ದು, ಆ ಚಿತ್ರದಲ್ಲಿ ಹೆಣ್ಣಿನ ಅವಹೇಳನ ನಡೆದಿದೆ ಎಂದೂ ವಿವಾದ ಉಂಟಾಗಿದ್ದು. ಈಗ ಮಾಟಗಾತಿ ಸಿನಿಮಾದ ವಿವಾದ ಎದ್ದಿದೆ.

ವೈಯಕ್ತಿಕ ಜೀವನದಲ್ಲಿ ಏಕ್ತಾ ಬಹಳ ದೈವಭಕ್ತೆ. ಮಾಟಗಾತಿಯ ಸಿನಿಮಾ ಮಾಡಿದರೆ ತನಗೇನೂ ತೊಂದರೆ ಆಗದಿರಲಿ ಎಂದು ಮೊನ್ನೆ ಈಕೆ ಕೋಲ್ಕತ್ತಾದ ಕಾಳೀಘಾಟ್‌ಗೆ ಭೇಟಿ ನೀಡಿ ಅಲ್ಲಿನ ಪ್ರಖ್ಯಾತ ಕಾಳಿಮಾತಾ ಆಶೀರ್ವಾದ ಪಡೆದಿದ್ದಾಳೆ. 'ಮಾಟಗಾತಿಯರದ್ದೂ ಒಂದು ಜೀವನ ವಿಧಾನ. ಹೆಣ್ಣನ್ನು ಮಾಟಗಾತಿಯಾಗಿ ನಾನು ತೋರಿಸಿದ್ದರಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಇರಲಿ. ನನ್ನದು ಕೇವಲ ಸಿನಿಮಾ' ಎಂದೂ ಏಕ್ತಾ ನುಡಿದಿದ್ದಾಳೆ. ●



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65